Mr. SPEAKER.—He is too intelligent for being advised by anybody.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಪೊಲಿಟಿಕಲ್ ನಫರರುಗಳಿಗೆ ತಾವು ಏನಾದರೂ ಒಂದು ಇಲ್ಲಿ ಮಾಡದೆಹೋದರೆ, ಪೊಲಿಟಿಕರ್ ಸ್ಟೆಬಿಲಿಟಿ ಇರುವುದಿಲ್ಲ. ಆಡಳಿತದಲ್ಲಿರತಕ್ಕಂಥ ಪಕ್ಷಕ್ಕೆ ಸ್ಟೆಬಿಲಿಟಿ ಇರುವುದಿಲ್ಲ; ಗವರ್ನ್‌ಮೆಂಟಿಗೆ ಸ್ಟೆಬಿಲಿಟಿ ಇರುವುದಿಲ್ಲ. ಆದ್ದರಿಂದ ನರಕಾರದವರು ನಾನು ಹೇಳುತ್ತಿರುವುದನ್ನು ಯೋಚನೆ ಮಾಡಬೇಕು. It is very high time for the Government this Government and Government of India to end giving of pension to the Rulers. ಅರಮನೆಗಳು, ಲಕ್ಷಾಂತರ ಎಕರೆ ಭೂಮಿ, ಕೋಟ್ಯಾಂತರ ರೂಪಾಯಿ ಒಡವೆ ವಸ್ತುಗಳು, ಬ್ಯಾಂಕಿನಲ್ಲಿ ಚೆನ್ನಾಗಿ ಹಣ ಇರುವಾಗ, ಬೆವರು ಸುರಿಸಿದ ಬೋರೆಗೌಡನ ಬೊಕ್ಕಸದಿಂದ ಈ ಮಹಾರಾಜರುಗಳಿಗೆ ಪ್ರೀವಿಪರ್ಸ್, ಅಲೊಯನ್ಸ್ ಏಕೆ ಕೊಡಬೇಕು ?

ಅಧ್ಯಕ್ಷರು.—ಅವರುಗಳ ಹಕ್ಕುಗಳನ್ನು ಕಿತ್ತುಕೊಳ್ಳಲಲ್ಲವೆ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪಟೇಲ ಶಾನುಬೋಗರ ಹಕ್ಕುಗಳನ್ನೂ ಕಿತ್ತುಕೊಂಡು ಬಿಟ್ಟಿದ್ದಾರೆ. ಆದರೆ ಅವರಿಗೆ ಎಷ್ಟು ಕೊಟ್ಟಿದ್ದಾರೆ? ಒಂದು ಎಕರೆ ಭೂಮಿ, 5 ರೂಪಾಯಿ ಕಾಂಪೆನ್ಸೇಶನ್. ಅಂಥಹದರಲ್ಲಿ ರೂಲರುಗಳಿಗೆ ಪೆನ್ಸನ್ ಏಕೆ ಕೊಡಬೇಕು ? ನಾನು ತಮ್ಮ ಮುಖಾಂತರ ಕೇಂದ್ರ ನರಕಾರಕ್ಕೆ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ.....

ಅಧ್ಯಕ್ಷರು.—ಕೇಂದ್ರ ನರಕಾರಕ್ಕೆ, ನನ್ನ ಮುಖಾಂತರ ಎಷ್ಟು ಮಾತ್ರಕ್ಕೂ ಸಾಧ್ಯವಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ಟೇಟ್ ಗವರ್ನಮೆಂಟ್ ಮಾಡಬೇಕೆಂದು ತಮ್ಮ ಮುಖಾಂತರ ನಾನು ಕೇಳುತ್ತೇನೆ. ಈ ಪ್ರೀವೀಪರ್ಸನ್ಸ್ ಅಂಡ್ ಅಲೊಯನ್ಸಸ್ ಟು ಇಂಡಯನ್ ರೂಲರ್ಸ್ ಕೊನೆಗಾಣಿಸಬೇಕು. ಅದಕ್ಕೆ ರಾಜ್ಯಾಂಗಕ್ಕೆ ಯಾವತರಹ ಕಾನೂನಿನ ತಿದ್ದುಪಡಿ ಬೇಕೋ, ಅಂಥ ತಿದ್ದುಪಡಿ ಬರುವುದಕ್ಕೆ ನಮ್ಮ ಮೈಸೂರು ನರಕಾರದವರು ಮುನ್ನುಗ್ಗುತ್ತಾರೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಇದನ್ನು ಕಾರ್ಯಗತ ಮಾಡುವುದರಲ್ಲಿ ಹಣಕಾಸಿನ ಸಚಿವರಾದ ಶ್ರೀಮಾನ್ ಜತ್ತಿಯವರು ಮುನ್ನುಗ್ಗುತ್ತಾರೆಂದು ಅಂದು ಕೊಂಡಿದ್ದೇನೆ.

Mr. SPEAKER.—Now the Member has forfeited his right to speak on other demands.

Sri C. J. MUCKANNAPPA.—With these observations, I conclude my speach.

BUSINESS OF THE HOUSE

Mr. SPEAKER.—I will be putting it to vote round about 2-30 P.M. tomorrow.

Before I call upon any other Member, there is one matter which has been brought to my notice, that the election to these various committees has been kept in a sort of suspended animation by representatives of all Parties coming and representing that they will give names jointly so that there may not be election at all. With the result, the forms have not been printed or cyclostyled. They had promised to give the list by 5 o 'clock. Now it is 5.30 P.M. Members should not mislead my Secretary.

Sri SIDDIAH KASIMATH.—The list is given, Sir.

Mr. SPEAKER.—Then should I take it that there is election tomorrow ?

Sri SIDDIAH KASIMATH.—There is going to be election, Sir.

Mr. SPEAKER.—Then how are the forms to be printed now? I am sure that Sri Kasimath is also a party who made the representation to the Secretary that there need not be any election and that he would give names.

Sri SIDDAIAH KASHIMATH.—But the other whips did not come to any agreement Sir.

Mr. SPEAKER.—All the whips are collectively responsible for it. I am postponing elections.

Sri B. V. MAGAVI (Haveri).—Sir, I request that as in the past, this time also, no elections need take place.

Mr. SPEAKER.—Then all the members should come to some understanding.

Sri G. V. GOWDA.—If the Finance Minister were to negotiate, we may be able to come to some agreement Sir.

Mr. SPEAKER.—I am told that there is election to only one Committee. I am postponing it to the 5th April. For others there is ample time.

Sri SIDDIAH KASHIMATH.—6th April is better, Sir.

Mr. SPEAKER.—For 6th there is some other work. I am sorry that Members some times only look at the tip of their nose right in front of them and nothing beyond!

Sri B. V. MAGAVI.—Sir, I am given to understand that negotiations are going on between the Congress Party Secretary and the Leader of the Opposition. It is better that the Speaker calls them to his Chamber.....

Mr. SPEAKER.—It is highly irregular for the Speaker to interfere with this.

Sri B. V. MAGAVI.—If it is going to help an understanding, the Speaker may intervene, Sir.

Mr. SPEAKER.—Tomorrow there is election to only one committee. There is ample time for others. For tomorrow, it is too late for ballot papers to be printed. We are therefore postponing that election to the 6th April.

† ಶ್ರೀ ಬಿ. ಬೈರಪ್ಪಾಜಿ.—ಮಾನ್ಯ ಸಭಾಪತಿಯವರೆ, ನಮ್ಮ ಮುಂದಿರತಕ್ಕ ಈ ಹತ್ತು ಡಿಮ್ಯಾಂಡುಗಳು ಏನಿವೆ ಅವುಗಳಲ್ಲಿರತಕ್ಕ ಕೆಲವು ನ್ಯೂನತೆಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ.

ಸ್ವಾಮಿ, ಮಾರಾಟ ತೆರಿಗೆ ಇರಾಖೆ ಏನಿದೆ, ಇದು ಸಣ್ಣಪುಟ್ಟ ವರ್ತಕರಿಗೆ ಕಠೋರವಾದಂಥ ಶಿಕ್ಷೆಯನ್ನು ಕೊಡತಕ್ಕಂಥ ಒಂದು ಇರಾಖೆಯಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ದೊಡ್ಡದಾಗಿ ವ್ಯಾಪಾರ ಮಾಡತಕ್ಕಂಥ ವರ್ತಕರು ಅನೇಕ ಸಂದರ್ಭಗಳಲ್ಲಿ ಈ ತೆರಿಗೆ ಕೊಡತಕ್ಕಂಥಾದ್ದನ್ನು ತಪ್ಪಿಸಿಕೊಂಡು ಹೋಗುತ್ತಾರೆ. ಆದನ್ನು ಹಿಡಿಯುವುದನ್ನು ಬಿಟ್ಟು ಬಡಬಗ್ಗರಿಗೆ, ಸಣ್ಣಪುಟ್ಟ ಬೀಡಿ ಅಂಗಡಿ ಅಥವ ಚಿಲ್ಲರೆ ಅಂಗಡಿ ಇಟ್ಟುಕೊಂಡಿರತಕ್ಕಂಥ ವರ್ತಕರಿಗೆ ಇಲ್ಲದ ತೊಂದರೆಯನ್ನು ಕೊಡತಕ್ಕಂಥ ಒಂದು ಇರಾಖೆ ಆಗಿದೆ ಇದು. ನಮ್ಮ ಒಂದು ಸಬ್-ಡಿವಿಜನ್ನಿನಲ್ಲಿ ಈ ಒಂದು ಇರಾಖೆ ಕೆಲಸ ಮಾಡುತ್ತಾ ಇರತಕ್ಕಂಥಾದ್ದನ್ನು ಸ್ವಲ್ಪ ಏಮರ್ಶೆ ಮಾಡುವುದಾದರೆ, ಇದರ ಸೂಕ್ಷ್ಮ ಪರಿಚಯವನ್ನು ಮಾನ್ಯ ಮಂತ್ರಿಗಳಿಗೆ ಮಾಡಿಕೊಡುವುದಕ್ಕೆ ಇಚ್ಛೆಪಡುತ್ತೇನೆ. ಸ್ವಾಮಿ, ತೆರಿಗೆಯನ್ನು ವಸೂಲ್ಮಾಡತಕ್ಕ ವಿಚಾರದಲ್ಲಿ ಎಲ್ಲ ಲಕ್ಷಾಂತರ ರೂಪಾಯಿಗಳ ವ್ಯವಹಾರ

ನಡೆಸುತ್ತಾರೋ ಅಂಥ ವರ್ತಕರೇನಿದ್ದಾರೆ, ಅವರೀದಿವಸ ತಮ್ಮಲ್ಲಿರತಕ್ಕ ಒಂದು ಹಣದ ಪ್ರಭಾವದಿಂದಲೋ ಅಥವಾ ತಮ್ಮ ಒಂದು ಮೈಯಿಕ್ಕಿಕ ರಾಜಕೀಯ ಪ್ರಭಾವದಿಂದಲೋ ತಾವು ಕೊಡಬೇಕಾಗಿರತಕ್ಕ ತೆರಿಗೆಯನ್ನು ಕೊಡದೆ ತಪ್ಪಿಸಿಕೊಳ್ಳುತ್ತಿದ್ದಾರೆ. ಈಗಾಗಲೇ ಶ್ರೀ ಟಿ. ಮಾದಯ್ಯಗೌಡರು ಹೇಳಿದಂತೆ, ಇನ್ನು ಈ ಸಣ್ಣಪುಟ್ಟ ವರ್ತಕರೇನಿದ್ದಾರೆ ಅವರಿಗೆ ಈ ತೆರಿಗೆ ಇಲಾಖೆಯವರು ಇಲ್ಲಸಲ್ಲದ ಕಿರುಕುಳವನ್ನು ಕೊಟ್ಟು, ನೀವು ಕಳ್ಳವ್ಯಾಪಾರ ಮಾಡುತ್ತಿದ್ದೀರಿ, ನೀವು ಲೆಕ್ಕಗಳನ್ನು ಸರಿಯಾಗಿಟ್ಟಿಲ್ಲ ಎಂಬುದಾಗಿ ನಾನಾ ಕಾರಣಗಳನ್ನು ಹೇಳುತ್ತಾ ಅವರಿಗೆ ಅನೇಕ ರೀತಿಯಲ್ಲಿ ತೊಂದರೆಗಳನ್ನು ಕೊಡುತ್ತಿದ್ದಾರೆಂಬ ಅಂಶವನ್ನು ನಾನೀನಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ತಿಪಟೂರು ಸಬ್‌ಡಿವಿಜನ್ನಿನಲ್ಲಿ ಈ ದಿವಸ ಈ ರೀತಿಯಾಗಿ ನಡೆಯುತ್ತಿದೆ. ಅಲ್ಲಿ ದೌರ್ಜನ್ಯ ಹಿಂಸಾಕೃತ್ಯಗಳನ್ನು ಮಾಡಿ ಬಡಬಗ್ಗರಿಗೆ ಜೀವನ ಸಾಗಿಸುವುದಕ್ಕೂ ಅವಕಾಶವಿಲ್ಲದಂತೆ ತೊಂದರೆಯನ್ನು ಕೊಡುತ್ತಿದ್ದಾರೆ. ಅವರಿಗೆ ಕೊಡತಕ್ಕ ಕಿರುಕುಳವನ್ನು ಅಷ್ಟಿಷ್ಟೆಂದು ಹೇಳುವುದಕ್ಕಾಗುವುದಿಲ್ಲ. ಇದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಸೂಕ್ತ ಏರ್ಪಾಡನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇದೊಂದು ತರಹೆಯ ದಗಲ್ಬಾಜಿ ವಸೂಲಿಯಿದ್ದ ಹಾಗೆ.....

ಅಧ್ಯಕ್ಷರು.—ಕಾಂಕ್ರೀಟ್ ಎವಿಡೆನ್ಸಸ್ ಇದ್ದರೆ ಅದನ್ನು ತಿಳಿಸಿ.

ಶ್ರೀ ಬಿ. ಬೈರಪ್ಪಾಜಿ.—ತುರುವೆಕೆರೆ, ತಿಪಟೂರು, ಚಿಕ್ಕನಾಯಕನಹಳ್ಳಿ ಈ ತಾಲ್ಲೂಕುಗಳಲ್ಲ ಹೀಗೆಲ್ಲಾ ಸಣ್ಣಪುಟ್ಟ ವರ್ತಕರಿಗೆ ಕಿರುಕುಳವನ್ನು ಕೊಡುತ್ತಿದ್ದಾರೆ. ಇನ್ನು ಇದೇ ರೀತಿಯಾಗಿ ಈ ಅಗ್ರಿಕಲ್ಚರ್ ಇನ್‌ಕಂಟ್ಯಾಕ್ಸನ್ನು ವಸೂಲ್ಮಾಡತಕ್ಕ ವಿಚಾರದಲ್ಲೂ ಇದೇ ರೀತಿ ಮಾಡುತ್ತಿದ್ದಾರೆ. ಸಣ್ಣಪುಟ್ಟ ರೈತರಿಗೆಲ್ಲಾ ಒಂದು ನೋಟೀಸನ್ನು ಸುಮ್ಮನೆ ಕೊಟ ರೆ ಆತ ಹೇಗೂ ಹೆದರಿಕೊಳ್ಳುತ್ತಾನೆಂಬ ಭಾವನೆಯಿಂದಲೇ ಇಲಾಖೆಯವರು ವಿನಾಕಾರಣ ಸಣ್ಣಪುಟ್ಟ ರೈತರಿಗೆಲ್ಲಾ ನೋಟೀಸನ್ನು ಕಳುಹಿಸಿ ಹಣವನ್ನು ಅಕ್ರಮವಾಗಿ ಗಳಿಸುವುದಕ್ಕೆ ಇದನ್ನೊಂದು ಮಾರ್ಗಮಾಡಿಕೊಂಡಿದ್ದಾರೆ. ಇಂಥ ಒಬ್ಬ ರೈತ ತೆರಿಗೆ ಕೊಡತಕ್ಕ ಲಿಸ್ಟಿನಲ್ಲಿ ಬರುವುದಿಲ್ಲವೆಂಬ ಅಂಶ ಇಲಾಖೆಯವರಿಗೆ ಚೆನ್ನಾಗಿ ಮನದಟ್ಟಾಗಿದ್ದರೂ ಉದ್ದೇಶಪೂರ್ವಕವಾಗಿ ಅವರಿಗೊಂದು ನೋಟೀಸನ್ನು ಕೊಟ್ಟು ನೀವು ಇಂಥ ತಾರೀಖು ಇಷ್ಟು ಗಂಟೆಗೆ ನಮ್ಮ ಕಛೇರಿಗೆ ಹಾಜರಾಗಬೇಕು, ಆಗ ನಿಮ್ಮ ಲೆಕ್ಕಪತ್ರಗಳನ್ನೆಲ್ಲಾ ತಂದು ತೋರಿಸಬೇಕು, ಇಲ್ಲದಿದ್ದರೆ ನಿಮಗೆ ಶಿಕ್ಷೆಯಾಗುತ್ತದೆ ಎಂಬುದಾಗಿ ಹೆದರಿಕೆ ಹಾಕತಕ್ಕ ಒಂದು ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ಇಂಥ ಒಂದು ಅಭ್ಯಾಸವನ್ನು ನಮ್ಮ ತುಮಕೂರು ಜಿಲ್ಲೆಯಲ್ಲಿ ಈ ಇಲಾಖೆಯ ಅಧಿಕಾರಿಗಳು ಇಟ್ಟುಕೊಂಡಿದ್ದಾರೆ. ಯಾವ ರೈತ ಕಷ್ಟಪಟ್ಟು ಜಮೀನಿನಿಂದ ಆದಾಯ ತೆಗೆಯಬೇಕೆಂದು ಪ್ರಯತ್ನಪಡುತ್ತಿದ್ದಾನೋ, ಯಾವ ರೈತ ಈ ದಿವಸ ದೇಶಕ್ಕೆ ಅನ್ನವನ್ನು ದುಡಿದು ಕೊಡುತ್ತಿದ್ದಾನೋ ಅಂಥಾ ಮನುಷ್ಯನಿಗೆ ಇಲಾಖೆಯವರು ಇಂಥ ಒಂದು ಕಿರುಕುಳವನ್ನು ಕೊಡುತ್ತಿದ್ದಾರೆ. ಈ ಇಲಾಖೆಯವರು ಒಂದೊಂದು ತಾಲ್ಲೂಕಿನಲ್ಲೂ ತಮ್ಮ ಕಡೆಯ ಒಬ್ಬೊಬ್ಬ ಅಸಾಮಿಯನ್ನು ಇಟ್ಟುಕೊಂಡು ಅವರ ಮೂಲಕ ಅಲ್ಲಿ ಸಾಮಾನ್ಯವಾಗಿ ಅಂಜುಬುರುಕ ರೈತ ಯಾರಿದ್ದಾನೆ, ಒಂದು ನೋಟೀಸನ್ನು ಕೊಟ್ಟರೆ ಹೆದರುವಂಥ ರೈತ ಯಾರಿದ್ದಾನೆಂಬುದನ್ನು ತಿಳಿದುಕೊಂಡು ಅಂಥವರಿಗೇ ನೋಟೀಸನ್ನು ವಿನಾಕಾರಣ ಕೊಡುತ್ತಿದ್ದಾರೆ. ಈ ವಿಚಾರವನ್ನು ಮಾನ್ಯ.....

Mr. SPEAKER.—This kind of allegation that members are called for into the office and corruption is going on, is no use. The member may mention specific cases and give names; that will be welcome.

Sri B. D. JATTI.—Where matters of corruption is involved, he may give us the names Sir; we will look into it.

ಶ್ರೀ ಬಿ. ಬೈರಪ್ಪಾಜಿ.—ಹೀಗೆ ಎಲ್ಲಾ ಅಧಿಕಾರಿಗಳೂ ಮಾಡುತ್ತಿದ್ದಾರೆಂದು ನಾನು ಹೇಳುತ್ತಿಲ್ಲ. ಕೆಲವರು ಈ ರೀತಿಯಾಗಿ ಕಿರುಕುಳವನ್ನು ಕೊಡುತ್ತಿದ್ದಾರೆ. ಯಾರು ಮರ್ಯಾದೆಯಿಂದ ವ್ಯವಸಾಯ ಮಾಡಿಕೊಂಡು, ಸುಖವಾಗಿ ಕಾಲವನ್ನು ತಳ್ಳಿಕೊಂಡು ಹೋಗೋಣ ಎಂದಿದ್ದಾರೋ ಅಂಥವರಿಗೆ ಉಳಿಗಾಲವಿಲ್ಲ. ಇದನ್ನು ಕೂಡಲೇ ಸರ್ಕಾರದವರು ತಪ್ಪಿಸಬೇಕೆಂದು ಅವರಲ್ಲ ಮನವಿಮಾಡಿಕೊಳ್ಳುತ್ತೇನೆ.

ಇನ್ನು ನಿವೃತ್ತಿವೇತನದ ಬಗ್ಗೆ ಹೇಳುವುದಾದರೆ, ಕಳೆದ ವರ್ಷಕ್ಕಿಂತ ಈ ವರ್ಷದಲ್ಲಿ ಇವು ಸ್ವಲ್ಪ ಬೇಗ ತೀರ್ಮಾನವಾಗುತ್ತಿರುವಂತೆ ಕಂಡುಬರುತ್ತಿದೆ. ಇವುಗಳನ್ನು ಅತಿಶೀಘ್ರವಾಗಿ, ವಿಳಂಬಕ್ಕೆ ಅವಕಾಶವಿಲ್ಲದಂತೆ, ಆದಷ್ಟು ಬೇಗ ಫೈನಲ್ಮಾಡಬೇಕು. ಸರ್ಕಾರದಲ್ಲಿ 30 ವರ್ಷಕಾಲ ದುಡಿದಿದ್ದವರಿಗೆ ಆದಷ್ಟು ಬೇಗ ಅನುಕೂಲಮಾಡಿಕೊಡಬೇಕು.

(ಶ್ರೀ ಬಿ. ಬೈರಪ್ಪಾಜಿ)

ಇನ್ನು ಸಾಲ ಕೊಡತಕ್ಕ ವಿಚಾರಕ್ಕೆ ಬಂದರೆ, ಇಲ್ಲಿಯೂ ರೈತನ ಪರಿಸ್ಥಿತಿ ಬಹಳ ದುರದೃಷ್ಟ ಕರವಾಗೇ ಇದೆ. ಈ ದಿವಸ ಸರ್ಕಾರದವರು ರೈತರಿಗೆ ಅನೇಕ ರೀತಿಯಲ್ಲಿ ಸಾಲಗಳನ್ನೊದಗಿಸು ತ್ತಿದ್ದಾರೆ. ಎತ್ತುಗಳನ್ನು ಕೊಳ್ಳುವುದಕ್ಕೂ ಜಮೀನಾಬಾದಿಗೂ, ಬಾವಿಗಳನ್ನು ತೆಗೆಸುವುದಕ್ಕೂ ಹೀಗೆಲ್ಲಾ ನಾನಾ ಉದ್ದೇಶಗಳಿಗಾಗಿ ಸಾಲ ಕೊಡುತ್ತಿದ್ದಾರೆ. ಹೀಗೆ ಈ ದಿವಸ ತಾಲ್ಲೂಕ್ ಅಮಲ್ದಾರರೂ ಮತ್ತು ಬ್ಲಾಕ್‌ಡೆವಲಪ್‌ಮೆಂಟ್ ಆಫೀಸರೂ ಕೊಡುತ್ತಿರುವ ಲಕ್ಷಾಂತರ ರೂಪಾಯಿಗಳನ್ನು ರೈತ ಪಡೆಯುತ್ತಿರುವುದಕ್ಕಾಗಿ ನಾವು ಇದನ್ನು ಸ್ವಾಗತಿಸಲೇ ಬೇಕು. ಆದರೆ ಇದರ ವಸೂಲಿ ಕ್ರಮ ಮಾತ್ರ ಬಹಳ ಕಠಿಣ ಹಾಗೂ ಕಠೋರ. ಇಲಾಖೆಯವರು ಒಬ್ಬ ರೈತನಿಗೆ ಸಾಲಕೊಟ್ಟ ನಂತರ ಆತನು ತನ್ನ ಸಾಲವನ್ನು ಇಂತಿಷ್ಟು ಕಂತುಗಳಲ್ಲಿ ಪಾವತಿ ಮಾಡಬೇಕು ಎಂಬುದನ್ನು ನಿರ್ಧರಿಸಿದ ಬಳಿಕ, ಇಲಾಖೆಯ ಅಧಿಕಾರಿಗಳು ಆ ಸಾಲಗಾರರಿಗೆ ಇಂಥ ತಾರೀಖು ನಿಮ್ಮ ಕಂತು ಬರಬೇಕಾಗಿದೆ ಎಂಬುದಾಗಿ ಒಂದು ಮುಂಗಡ ನೋಟೀಸನ್ನು ಕೊಡಬೇಕಾದ್ದು ಅತ್ಯವಶ್ಯಕ. ಹೀಗೆ ಮಾಡಬೇಕಾದ್ದು ಅಧಿಕಾರಿಗಳ ಕರ್ತವ್ಯ. ಆದರೆ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ಪರಿಪಾಲಿಸದೆ ತಮ್ಮ ಡ್ಯೂಟಿಯಲ್ಲಿ ತಾವು ಕರ್ತವ್ಯವಿಮುಖರಾಗಿದ್ದರೂ, ಇವರ ತಪ್ಪನ್ನು ರೈತರಮೇಲೆ ಹಾಕಿ 4-5 ವರ್ಷಗಳ ಕಾಲ ನುಮ್ಮನಿದ್ದು ಆ ರೈತರಿಂದ ಒಂದಕ್ಕೆ ಎರಡರಷ್ಟು ಬಡ್ಡಿಯನ್ನು ವಸೂಲ್ಮಾಡುತ್ತಿದ್ದಾರೆ. ಇವರೇತಕ್ಕೆ ಕಾಲಕ್ಕೆ ಸರಿಯಾಗಿ ಅವರಿಗೆ ಒಂದು ನೋಟೀಸನ್ನು ಕೊಡಬಾರದಾಗಿತ್ತು ಎಂದು ನಾನು ಕೇಳುತ್ತೇನೆ ? ಇಲಾಖೆಯವರ ಈ ಒಂದು ಅಶ್ರದ್ಧೆಯಿಂದ ಅವರು ರೈತನಿಗೆ ಈ ದಿವಸ ಹೆಸರಿಗೆ 7 ಪರ್ಸೆಂಟ್ ಬಡ್ಡಿ ಹಾಕಿದ್ದೇವೆಂದು ಹೇಳಿದಾಗ್ಗೂ ಅದು ಹಣವನ್ನು ತೀರಿಸುವ ವೇಳೆಗೆ 17 ಪರ್ಸೆಂಟಿಗಿಂತ ಹೆಚ್ಚಾಗಿರುತ್ತದೆ.....

ಶ್ರೀ ಬಿ. ಡಿ. ಜತ್ತಿ.—ರೈತರು ಸಾಲವನ್ನು ಕೊಡುವುದಕ್ಕೆ ಬಂದಾಗ ನಮ್ಮ ಅಧಿಕಾರಿಗಳು ಯಾರಾದರೂ ಅದನ್ನು ತೆಗೆದುಕೊಳ್ಳುವುದಿಲ್ಲ, ಅದನ್ನು ಬೇಡ ಎಂತ ಹೇಳಿದ್ದಾರೇನು ?

ಶ್ರೀ ಬಿ. ಬೈರಪ್ಪಾಜಿ.—ತಾವು ಹೇಳತಕ್ಕದ್ದನ್ನು ನಾನೂ ಸಹ ಸ್ವಲ್ಪ ಮಟ್ಟಿಗೆ ಒಪ್ಪಿಕೊಳ್ಳು ವುದಾಗಿದ್ದರೂ, ರೈತನಾಗಿರತಕ್ಕವನಿಗೆ ತಾವು ಇಂಥಾ ತಾರೀಖೇ ಕಂತನ್ನು ಪಾವತಿಮಾಡಬೇಕು ಎಂಬುದು ಆತನಿಗೆ ಗೊತ್ತಾಗುವುದಿಲ್ಲ. ನಮ್ಮ ರೈತರಲ್ಲಿ ಅಂದರೆ ದೇಶದಲ್ಲಿರತಕ್ಕ ಜನರಲ್ಲಿ 100 ಕ್ಕೆ 80 ಜನ ರೈತರೇನಿದ್ದಾರೆ, ಅವರಲ್ಲಿ 100 ಕ್ಕೆ 12 ಜನರು ಸಾಮಾನ್ಯ ವಿದ್ಯಾವಂತರು ಎಂದ ಮೇಲೆ ಇನ್ನುಳಿದವರೆಲ್ಲಾ ಅನಕ್ಷರಸ್ಥರು ಅವಿದ್ಯಾವಂತರು. ಅಂಥವರಿಗೆ ಈ ಲೆಕ್ಕಗಳನ್ನಿಡಲು ಸಾಧ್ಯ ವಿಲ್ಲ. ಆದರೆ ಈ ಬಾಬಿನಲ್ಲಿ ಇಲಾಖೆಯವರು ತಮ್ಮ ಕರ್ತವ್ಯದಲ್ಲಿ ವಿಮುಖರಾಗಿದ್ದಾರೆ. ಇದರಿಂದ ರೈತರು ಒಂದಕ್ಕೆ ಎರಡರಷ್ಟು ಬಡ್ಡಿಯನ್ನು ತೆರಬೇಕಾಗಿದೆ. ತುರುವೆಕೆರೆ ತಾಲ್ಲೂಕಿನಲ್ಲಿ ಇಂಥ ಪ್ರಸಂ ಗಗಳು ನಡೆದಿವೆ. ಅದನ್ನೀಗ ನಾನು ಸರ್ಕಾರದವರು ಗಮನಕ್ಕೆ ತಂದಿದ್ದೇನೆ. ಅದನ್ನು ತಡೆಗಟ್ಟ ಬೇಕಾದುದು ಅವರ ಆದ್ಯಕರ್ತವ್ಯ. ಯಾವ ರೈತ ಇಂಥ ದಿವಸ ತನ್ನ ಕಂತನ್ನು ಕಟ್ಟಬೇಕೋ ಅದಕ್ಕೆ ಒಂದು ವಾರ ಮುನ್ನ ಆತನಿಗೊಂದು ನೋಟೀಸನ್ನು ಕೊಡುವಂತೆ ಒಂದು ವ್ಯವಸ್ಥೆಯನ್ನು ಸರ್ಕಾರ ದವರು ಕಡ್ಡಾಯವಾಗಿ ಮಾಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಇನ್ನು ಈ ಸಾಲಕೊಡ ತಕ್ಕ ವಿಧಾನದಲ್ಲಿ ನಾನು ಹೋದ ವರ್ಷವೂ ಇದೆನ್ನೇ ಹೇಳಿದ್ದೆ, ಈಗಲೂ ಅದನ್ನೆ ಹೇಳಬೇಕಾಗಿದೆ. ಸರ್ಕಾರದವರು ರೈತನಿಗೆ ಮಂಜೂರು ಮಾಡತಕ್ಕ ಹಣಡಲ್ಲಿ, ಆ ಹಣ ಆತನ ಕೈಸೇರುವ ಹೊತ್ತಿಗೆ ಅರ್ಧಕ್ಕಿಂತಲೂ ಕಡಮೆಯಾಗುತ್ತ ಬರುತ್ತದೆ.

ಇದರಲ್ಲಿ ಅನೇಕ ಲೋಪದೋಷಗಳಿಂದ ಕೂಡಿದಂತಹ ಪರಿಸ್ಥಿತಿ ಇದೆ, ಎಲ್ಲವನ್ನೂ ಕೂಡ ಬಿಚ್ಚಿ ಹೇಳುವುದಕ್ಕೆ ನಾನು ಇಚ್ಛೆಪಡುವುದಿಲ್ಲ. ಅದಷ್ಟು ಒಂದು ಪ್ರಯಾರಿಟಿಯನ್ನು ಇಟ್ಟುಕೊಂಡು ಮೊದಲು ಅರ್ಜಿ ಬಂದಿದ್ದರೆ ಆತನಿಗೆ ಮುಂಚೆ ಕೊಡಬೇಕು, ಎರಡನೆಯ ಸಾರಿ ಬಂದಿದ್ದರೆ ಆತನಿಗೆ ಎರಡನೆಯ ಕಂತಿನಲ್ಲಿ ಕೊಡಬೇಕು. ಈ ರೀತಿ ನಡೆಯದೇ ಅನೇಕ ಸಂದರ್ಭಗಳಲ್ಲಿ ಲೋಪದೋಷ ಗಳಿಗೆ ಎಡೆಕೊಟ್ಟಂತಹ ಪರಿಸ್ಥಿತಿ ಇದೆ. ಯಾರೇ ಅಧಿಕಾರಿಗಳನ್ನು ಹಣವನ್ನು ಮಂಜೂರು ಮಾಡಲ ಪ್ರಯಾರಿಟಿ ಬೇಸಿಸ್ ಮೇಲೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಸೂಚನೆ ಕೊಡ ಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದಷ್ಟೂ ಸಹಕಾರ ಸಂಘಗಳ ಮೂಲಕ ಸಾಲವನ್ನು ಹಂಚತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದವರಿಗೆ ಸೂಚನೆ ಯನ್ನು ಕೊಡಲು ಇಷ್ಟಪಡುತ್ತೇನೆ. ಇಷ್ಟು ಹೇಳಿ ಎರಡು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟಂಥ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತಾ ಇದ್ದೇನೆ.

† ಶ್ರೀ ಸಂಜೀವನಾಥ ಐಕಳ.—ಈ ಹಿಂದೆ ಮಾತನಾಡಿದಂತಹ ಕೆಲವು ಸದಸ್ಯರು ಹೇಳಿದಂತೆ ಸೇಲ್ಸ್‌ಟ್ಯಾಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ಆಗುತ್ತಿರುವಂತೆ ಅನ್ಯಾಯ ಅಂತ ಹೇಳಲಿಕ್ಕೆ ಬಯಸುವುದಿಲ್ಲ, ಆ ವಿಚಾರಗಳ ಬಗ್ಗೆ ನಾನು ಕೆಲವು ಮಾತುಗಳನ್ನು ಆಡಲು ಇದ್ದೇನೆ. ನಿಜವಾಗಿಯೂ ಪ್ರಾಮಾಣಿಕರಾದ ವರ್ತಕರಿಗೆ ಈ ಸೇಲ್ಸ್‌ಟ್ಯಾಕ್ಸ್ ಎಂಬುದು ಬಹಳ ಸಂಕಟದಾಯಕವಾದ ರೀತಿಯಲ್ಲಿ ಜಾರಿಯಾಗುತ್ತಾ ಇದೆ. ಇದರಲ್ಲಿ ಬಹಳ ಚೆನ್ನಾಗಿ ತಿಳಿದಂತಹ ಒಂದು ನೀತಿ ಏನೆಂದರೆ ಯಾವುದೇ ಒಂದು ಟ್ಯಾಕ್ಸನ್ನು ಸಂಗ್ರಹಿಸುವಾಗ ಯಾರಿಂದ ಸಂಗ್ರಹಿಸಲ್ಪಡುತ್ತದೆಯೋ ಅವರಿಗೆ ಅದರಿಂದ ತೊಂದರೆಯಾಗಬಾರದು ಮತ್ತು ಅದರಿಂದ ಅವರಿಗೆ ಸರಿಯಾದ ಪ್ರತಿಫಲ ದೊರಕಬೇಕು ಎಂಬು ಒಂದು ತತ್ವ ಇದೆ. ಆದರೆ ಇಲ್ಲಿ ಹಾಗೆ ಆಗುತ್ತಾ ಇಲ್ಲ. ಯಾರಿಂದ ಸೇಲ್ಸ್ ಟ್ಯಾಕ್ಸನ್ನು ಸಂಗ್ರಹ ಮಾಡುತ್ತಾ ಇದ್ದೇವೆಯೋ ಅವರಿಗೆ ಇದು ಬಹಳ ಕಷ್ಟದಾಯಕವಾಗಿದೆ. ಇದು ಎಷ್ಟರ ವರೆಗೆ ಆಗುತ್ತಾ ಇದೆ ಎಂದರೆ, ಸಣ್ಣಪುಟ್ಟ ವ್ಯಾಪಾರಸ್ಥರು, ಪ್ರಾಮಾಣಿಕ ವ್ಯಾಪಾರಸ್ಥರು ಯಾರಿದ್ದಾರೆ ಅವರು ವ್ಯಾಪಾರ ಮಾಡುವುದನ್ನೇ ಬಿಡುವಂತಹ ಪ್ರಸಂಗ ಬಂದಿದೆ. ಯಾರು ಅಪ್ರಾಮಾಣಿಕರಾಗಿ ಎರಡೆರಡು ಪುಸ್ತುಕಗಳನ್ನು ಇಟ್ಟು ಲೆಕ್ಕ ಬರೆಯುತ್ತಾರೆ; ಬಂದಂತಹ ಅಧಿಕಾರಿಗಳಿಗೆ, ಲಂಚ ಅಂತ ಹೇಳಬಾರದು, ಹೇಳಿದರೆ ತಪ್ಪಾಗುತ್ತದೆ, ಬೇರೆ ರೀತಿಯಲ್ಲಿ ಪ್ರಭಾವಕ್ಕೆ ಒಳಮಾಡಿಕೊಂಡು ಇರುತ್ತಾರೆ; ಅಂತಹವರಿಗೆ ತೊಂದರೆಯಾಗುವುದಿಲ್ಲ. ಪ್ರಾಮಾಣಿಕ ವರ್ತಕರಿಗೆ ತೊಂದರೆಯಾಗಿದೆ. ಅಪ್ರಾಮಾಣಿಕ ವರ್ತಕರಿಗೆ ಇದು ಲಾಭದಾಯಕವಾಗಿದೆ. ಆದ್ದರಿಂದ ಇದನ್ನು ಆದಷ್ಟೂ ಸಿಂಪ್ಲಿಫೈ ಮಾಡಬೇಕು. ಸಿಂಗಲ್ ಪಾಯಿಂಟ್ ಹಾಕಬೇಕೆಂದು ಹಾಕಬೇಕೆಂದು ಅನೇಕರು ಒತ್ತಾಯಿಪಡಿಸಿದರು ಆದರೆ ಮಾನ್ಯ ಆರ್ಥಿಕ ಮಂತ್ರಿಗಳು ಹಾಗೆ ಮಾಡಿದರೆ ಹೆಚ್ಚಿಗೆ ಟ್ಯಾಕ್ಸ್ ಸಿಕ್ಕುವುದಿಲ್ಲ. ಆದ್ದರಿಂದ ಮಲ್ಟಿಪಾಯಿಂಟ್ ಹಾಕುತ್ತೇವೆ ಎಂದು ಹೇಳಿದರು.

ಶ್ರೀ ಬಿ. ಡಿ. ಜತ್ತಿ.—ಬೇರೆ ಇನ್ನೆಲ್ಲಾದರೂ ಆ ರೀತಿ ಮಾಡಿದ್ದಾರೆಯೇ ?

ಶ್ರೀ ಸಂಜೀವನಾಥ ಐಕಳ.—ಇಲ್ಲ. ಯಾರೂ ಮಾಡಿಲ್ಲ. ಬಾಕಿ ಕಡೆ ಮಾಡಿಲ್ಲದೇ ಇದ್ದರೆ ನಾವೇಕೆ ಮಾಡಬಾರದು ? ಆದೂ ಅಲ್ಲದೆ ಪರಮಾವಧಿ ಮಿತಿ ಬಗ್ಗೆ ನಾನು ಒಂದೆರಡು ಮೂರು ಸಲ ಈ ಸಭೆಯಲ್ಲಿ ಹೇಳಿದ್ದೇನೆ. ಅದನ್ನು ಏಳೂವರೆ ಸಾವಿರದಿಂದ ಕನಿಷ್ಟ ಪಕ್ಷ ಹನ್ನೆರಡೂವರೆ ಸಾವಿರ ರೂಪಾಯಿಗಳವರೆಗೂ ಹೆಚ್ಚಿಸಬೇಕೆಂದು ಹೇಳಿದ್ದೇನೆ. ಹಾಗೆ ಮಾಡದೇ ಇರುವುದರಿಂದ ಸಣ್ಣ ಪುಟ್ಟ ವರ್ತಕರಿಗೆ ತೊಂದರೆಯಾಗುತ್ತಾ ಇದೆ.

ಶ್ರೀ ಬಿ. ಡಿ. ಜತ್ತಿ.—ತಾವು ಹೇಳುವ ಹಾಗೆ ಮಾಡಿದರೆ ಆದಾಯ ಹೆಚ್ಚಾಗುತ್ತದೆಯೇ ?

ಶ್ರೀ ಸಂಜೀವನಾಥ ಐಕಳ.—ಆಗಬಹುದು. ಏಳೂವರೆ ಸಾವಿರ ರೂಪಾಯಿ ಎಂದರೆ 20-25 ರೂಪಾಯಿ ಉತ್ಪನ್ನ ಮಾಡುವವರೂ ಬರುತ್ತಾರೆ ಅಂತಹವರು ಪ್ರತ್ಯೇಕವಾದ ಒಂದು ಲೆಕ್ಕ ಇಡುವುದು ಎಂದರೆ ಬಹಳ ಕಷ್ಟದಾಯಕವಾದ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಅದನ್ನು ಹನ್ನೆರಡೂವರೆ ಸಾವಿರ ರೂಪಾಯಿಗಳವರೆಗೂ ಹೆಚ್ಚಿಸಿದರೆ ಸಣ್ಣ ವ್ಯಾಪಾರಸ್ಥರು, ಬೀಡಾ ಬೀಡಿ ಅಂಗಡಿಯವರುಗಳಿಗೆ ತೊಂದರೆಯಾಗುವುದಿಲ್ಲ. ಅಂತಹವರಿಗೆ ಕಾಂಪೌಂಡಿಂಗ್ ಮಾಡಿ ತೊಂದರೆ ತಪ್ಪಿಸಬಹುದು ಎಂದು ತಾವು ಹೇಳುತ್ತೀರಿ ಆದರೂ ಕೂಡ ಅದರಿಂದ ಸಣ್ಣಪುಟ್ಟ ವ್ಯಾಪಾರಸ್ಥರಿಗೆ ಪ್ರಯೋಜನವಾಗುವುದಿಲ್ಲ. ಮಹಾರಾಷ್ಟ್ರದಲ್ಲಿ 25 ಸಾವಿರಕ್ಕೆ ಮೇಲ್ಪಟ್ಟು ಹಾಕಿದ್ದಾರೆ, ಹಾಗಿರುವಾಗ ನಮ್ಮಲ್ಲಿ ಹನ್ನೆರಡೂವರೆ ಸಾವಿರಕ್ಕೆ ಏಕೆ ಏರಿಸಬಾರದು ? ಆದ್ದರಿಂದ ಆ ರೀತಿ ಈಗ ಇರತಕ್ಕ ಒಂದು ಪರಿಮಿತಿಯನ್ನು ಹನ್ನೆರಡೂವರೆ ಸಾವಿರಕ್ಕೆ ಕೊಂಡು ಹೋಗಬೇಕೆಂದು ನಾನು ಬಹಳ ಕಳಕಳಿಯಿಂದ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಇನ್ನು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್‌ನ ವಿಷಯವನ್ನು ಮಾನ್ಯ ಸದಸ್ಯರು ಬಹಳ ವಿಷದವಾಗಿ ಹೇಳಿದ್ದಾರೆ. ನಾನಾದರೂ ರೈತ ಕುಟುಂಬದಿಂದ ಬಂದವನು. ಬಡ ರೈತರ ಹಿತದೃಷ್ಟಿಯಿಂದ ಈ ಬಗ್ಗೆ ಕೆಲವು ಸಲಹೆಗಳನ್ನು ಹೇಳಿದರೆ ತಪ್ಪಾಗಲಾರದು ಏಕೆಂದರೆ ಸ್ವಪ್ರಯತ್ನದಿಂದ ಕೃಷಿ ಉತ್ಪಾದನೆ ಏನಿದೆ ಅದಕ್ಕೆ ಸರ್ಕಾರದಿಂದ ಬೇರೆ ರೀತಿಯಿಂದ ಪ್ರೋತ್ಸಾಹ ಇದ್ದರೂ ಕೂಡ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಹಾಕುತ್ತಾ ಇರುವುದರಿಂದ ಅವರಿಗೆ ಹೆಚ್ಚಿನ ರೀತಿಯಲ್ಲಿ ಪ್ರಯೋಜನವಾಗುತ್ತಾ ಇಲ್ಲ. ಆದ್ದರಿಂದ ಇದರಲ್ಲೂ ಸಹ ಎಕ್ಸೆಂಪ್ಷನ್ ಪರಿಮಿತಿಯನ್ನು ಹೆಚ್ಚು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೆಲವು ಕಡೆಗಳಲ್ಲಿ ಇದಕ್ಕೆ ಸಂಬಂಧಪಟ್ಟ ಆಫೀಸರುಗಳು ಬಹಳ ಕಡಿಮೆ ಇದ್ದಾರೆ. ಚಿಕ್ಕಮಗಳೂರು ಜಿಲ್ಲೆಯಿಂದ ಬರುವಷ್ಟು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಬೇರೆ ಯಾವ ಜಿಲ್ಲೆಯಿಂದಲೂ ಬರುವುದಿಲ್ಲ.

ಅಧ್ಯಕ್ಷರು.—ಕೊಡಗಿನಿಂದ ಜಾಸ್ತಿ ಬರುತ್ತದೆ ಎಂದು ಕಾಣುತ್ತದೆ. ತಾವು ಇವತ್ತು ರಾತ್ರಿ ಕುಳಿತುಕೊಂಡು ಯೋಚನೆ ಮಾಡಿನೋಡಿ ನಾಳೆ ಹೇಳಿ.

The House will now adjourn to meet at Twelve noon Tomorrow.

The House adjourned at Six of the Clock to meet again at Twelve of the Clock on Thursday, the 25th March 1965.

WD 4900 GPB—500—16-6-1965